**ಓ.ಎಸ್. ನಂಃ 176/2021**

**ಪಿಡಬ್ಲ್ಯೂಃ1**

**ದಿನಾಂಕಃ 10.09.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಕೆ.ಎಸ್ ವಕೀಲರಿಂದಃ**

9. ಪ್ರತಿವಾದಿಯು ಸಂಬಂಧದಲ್ಲಿ ನನಗೆ ಅತ್ತಿಗೆಯಾಗಿರುತ್ತಾರೆ. ನನ್ನ ತಂದೆಯವರಿಗೆ ನಾವು ಒಟ್ಟು 5 ಜನ ಮಕ್ಕಳು ಅವರ ಹೆಸರು ನಾಗರತ್ನ, ಕಮಲಾಕ್ಷಿ, ಪ್ರಕಾಶ, ನಾನು ಮತ್ತು ರಾಧ ಅಂತ ಇರುತ್ತೇವೆ. ನನಗೆ ಜಯಮ್ಮ ಎನ್ನುವ ಸಹೋದರಿ ಇಲ್ಲ. ವಾದಪತ್ರದಲ್ಲಿ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಸಹೋದರಿಯ ಜಮೀನು ಇದೆ ಎಂದು ಬರೆಸಿರುವುದಿಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಉತ್ತರ ದಿಕ್ಕಿಗೆ ನನ್ನ ತಂಗಿಯಾದ ಜಯಮ್ಮಳ ಜಮೀನು ಇದೆ ಎಂದು ನಾನು ಬರೆಸಿರುವುದಿಲ್ಲ. ದಾವಾ ಐಟಂ ನಂ.2 ರ ಆಸ್ತಿಯ ದಕ್ಷಿಣ ದಿಕ್ಕಿಗೆ ನನ್ನ ತಂಗಿಯಾದ ಜಯಮ್ಮಳ ಜಮೀನು ಇದೆ ಎಂದು ನಾನು ಬರೆಸಿರುವುದಿಲ್ಲ. ಪ್ರತಿವಾದಿಯು ನನ್ನ ಅಕ್ಕನ ಮಗಳು ಅಲ್ಲ. ದಾವಾ ಐಟಂ ನಂ.1 ರ ದಕ್ಷಿಣ ದಿಕ್ಕಿಗೆ ನನ್ನ ಅಕ್ಕನ ಮಗಳಾದ ವಿಜಯಕುಮಾರಿರವರ ಜಮೀನು ಇದೆ ಎಂದು ನಾನು ಬರೆಸಿರುವುದಿಲ್ಲ. ದಾವಾ ಐಟಂ ನಂ.2 ರ ಉತ್ತರ ದಿಕ್ಕಿಗೆ ನನ್ನ ಅಕ್ಕನ ಮಗಳಾದ ವಿಜಯಕುಮಾರಿರವರ ಜಮೀನು ಇದೆ ಎಂದು ನಾನು ಬರೆಸಿರುವುದಿಲ್ಲ. ದಾವಾ ಐಟಂ ನಂ.1 ಮತ್ತು 2 ರ ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ನನ್ನ ಅಕ್ಕನ ಮಗಳಾದ ವಿಜಯಕುಮಾರಿರವರ ಜಮೀನು ಎಂದು ಬರೆಸಿರುವುದು ತಪ್ಪು. ನನಗೆ ದಾವಾ ಆಸ್ತಿಗಳ ಚೆಕ್ಕುಬಂದಿ ಗೊತ್ತಿಲ್ಲದಿದ್ದರೂ ಸಹ ಪ್ರತಿವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಚೆಕ್ಕುಬಂದಿಗಳನ್ನು ತೋರಿಸಿ ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

10. ವಿಲುನಾಮೆಗಳನ್ನು ಮಾಡುವ ಕಾಲಕ್ಕೆ ದಾವಾ ಆಸ್ತಿಗಳು ಕಾವೇರಮ್ಮರವರ ಹೆಸರಿನಲ್ಲಿಯೇ ಇದ್ದವು. ದಾವಾ ವಿಲುನಾಮೆಗಳನ್ನು ಮಾಡುವ ಕಾಲಕ್ಕೆ ದಾವಾ ಆಸ್ತಿಗಳು ಕಾವೇರಮ್ಮ ಮತ್ತು ಪ್ರತಿವಾದಿಯ ಜಂಟಿ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ. ದಾವಾ ವಿಲುನಾಮೆಗಳನ್ನು ಮಾಡುವ ಕಾಲಕ್ಕೆ ದಾವಾ ಆಸ್ತಿಗಳು ಬೇರೆ ಬೇರೆ ಪೋಡಾಗಿ ಕಾವೇರಮ್ಮ ಮತ್ತು ಪ್ರತಿವಾದಿಯ ಪ್ರತ್ಯೇಕ ಹೆಸರಿನಲ್ಲಿದ್ದವು.

11. ನಿಪಿ.1 ರಿಂದ 4 ರ ವಿಲುನಾಮೆಗಳಲ್ಲಿ ದಾವಾ ಆಸ್ತಿಗಳ ಚೆಕ್ಕುಬಂದಿ ಬೇರೆಬೇರೆಯಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ವಿಲುನಾಮೆಗಳನ್ನು ಮಾಡುವ ಕಾಲಕ್ಕೆ ದಾವಾ

ಆಸ್ತಿಗಳು ಕಾವೇರಮ್ಮ ಮತ್ತು ಪ್ರತಿವಾದಿಯ ಜಂಟಿ ಹೆಸರಿನಲ್ಲಿದ್ದ ಕಾರಣ ನನ್ನ ಗಂಡ ಮೋಸದಿಂದ ಕಾವೇರಮ್ಮರವರಿಂದ ದಾವಾ ವಿಲುನಾಮೆಗಳನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

12. ಕಾವೇರಮ್ಮರವರು ದಿವಂಗತ ರಾಜಶೆಟ್ಟಿ ಮತ್ತು ಲಕ್ಷ್ಮಮ್ಮ @ ಸಣ್ಣಮ್ಮ ರವರ ಮಗಳು ಎಂದರೆ ಸರಿ. ಸದರಿ ರಾಜಶೆಟ್ಟಿ ಮತ್ತು ಸಣ್ಣಮ್ಮರವರಿಗೆ ನಾಗಮ್ಮ ಎನ್ನುವ ಹಿರಿಯ ಮಗಳು ಇದ್ದಳು ಎಂದರೆ ಸರಿ. ಸದರಿ ನಾಗಮ್ಮ ರವರ ಗಂಡನ ಹೆಸರು ಎಂ.ಬಿ.ನಂಜುಂಡಶೆಟ್ಟಿ ಅಂತ ಇರುತ್ತದೆ ಎಂದರೆ ಸರಿ. ನಾಗಮ್ಮ ರವರೊಂದಿಗೆ ದಾಂಪತ್ಯ ಜೀವನದಲ್ಲಿ ಎಂ.ಬಿ.ನಂಜುಂಡಶೆಟ್ಟಿರವರಿಗೆ ಮಕ್ಕಳಾಗದಿದ್ದ ಕಾರಣ ಕಾವೇರಮ್ಮರವರನ್ನು ಸದರಿ ಎಂ.ಬಿ.ನಂಜುಂಡಶೆಟ್ಟಿರವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಕಾವೇರಮ್ಮ ಮತ್ತು ಎಂ.ಬಿ.ನಂಜುಂಡಶೆಟ್ಟಿರವರ ಮದುವೆಯಾದ ಕೆಲವು ವರ್ಷಗಳ ನಂತರ ಎಂ.ಬಿ.ನಂಜುಂಡಶೆಟ್ಟಿ ಮತ್ತು ನಾಗಮ್ಮರವರಿಗೆ ಪ್ರತಿವಾದಿ ಜನಿಸಿರುತ್ತಾರೆ ಎಂದರೆ ಸರಿ. ಕಾವೇರಮ್ಮ ಮತ್ತು ನಂಜುಂಡಶೆಟ್ಟಿ ರವರ ದಾಂಪತ್ಯ ಜೀವನದಲ್ಲಿ ಅವರಿಗೆ ಮಕ್ಕಳಾಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯು ಕಾವೇರಮ್ಮ ಮತ್ತು ನಾಗಮ್ಮರವರನ್ನು ನೋಡಿಕೊಳ್ಳಬೇಕು ಎನ್ನುವ ಉದ್ದೇಶದಿಂದ ದಾವಾ ಆಸ್ತಿಗಳನ್ನು ಕಾವೇರಮ್ಮ ಮತ್ತು ಪ್ರತಿವಾದಿಯ ಜಂಟಿ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪೈಕಿ ಇಂತಿಷ್ಟು ವಿಸ್ತೀರ್ಣದ ಜಮೀನು ನಿರ್ದಿಷ್ಟ ಚೆಕ್ಕುಬಂದಿಯೊಂದಿಗೆ ಕಾವೇರಮ್ಮನ ಪಾಲಿಗೆ ಲಕ್ಷ್ಮಮ್ಮರವರು ಕೊಟ್ಟಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

13. ಲಕ್ಷ್ಮಮ್ಮ @ ಸಣ್ಣಮ್ಮ ರವರ 3 ನೇ ಮಗಳಾದ ಜಯಮ್ಮನ ಮಗನೇ ನನ್ನ ಗಂಡನಾಗಿರುತ್ತಾರೆ ಎಂದರೆ ಸರಿ. ನನ್ನ ಮಾವನ ಹೆಸರು ಸಂಜೀವಶೆಟ್ಟಿ ಎಂದರೆ ಸರಿ. ಕಾವೇರಮ್ಮ ಮತ್ತು ನಾಗಮ್ಮ ರವರು ನಂಜುಂಡಶೆಟ್ಟಿಯೊಂದಿಗೆ ಜೊತೆಯಾಗಿ ಸಂಸಾರ ಮಾಡುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಗಳು ಕಾವೇರಮ್ಮ ಮತ್ತು ಪ್ರತಿವಾದಿಯ ಜಂಟಿ ಮಾಲೀಕತ್ವ ಮತ್ತು ಜಂಟಿ ಸ್ವಾಧೀನದಲ್ಲಿದ್ದವು ಎಂದರೆ ಸರಿಯಲ್ಲ.

14. 2014 ರಲ್ಲಿ ಕಾವೇರಮ್ಮ ಮತ್ತು ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಮೌಖಿಕ ವಿಭಜನೆ ಮಾಡಿಕೊಂಡಿರುತ್ತಾರೆ. 2014 ರಲ್ಲಿ ಮೌಖಿಕ ವಿಭಜನೆ ಆದಕಾರಣ 2014 ರ ಪೂರ್ವದಲ್ಲಿ ದಾವಾ ವಿಲುನಾಮೆಗಳನ್ನು ಬರೆಯಲು ಕಾವೇರಮ್ಮರವರಿಗೆ ಯಾವುದೇ ಅಧಿಕಾರವಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಕಾವೇರಮ್ಮ ಮತ್ತು ಪ್ರತಿವಾದಿಯ ಜಂಟಿ ಹೆಸರಿನಲ್ಲಿದ್ದ ಕಾರಣ ನಿಪಿ.1 ರಿಂದ 4 ರ ವಿಲುನಾಮೆಗಳನ್ನು ಕಾವೇರಮ್ಮರವರಿಗೆ ಬರೆಯಲು ಯಾವುದೇ

ಅಧಿಕಾರವಿಲ್ಲದಿದ್ದರೂ ಸಹ ನನ್ನ ಗಂಡ ಮೋಸದಿಂದ ನಿಪಿ.1 ರಿಂದ 4 ರ ದಾಖಲೆಗಳನ್ನು ಸೃಷ್ಟಿಸಿದ್ದು, ಸದರಿ ಸುಳ್ಳು ದಾಖಲೆಗಳ ಆಧಾರದ ಮೇಲೆ ನಾವು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಎಂದಿಗೂ ಸಹ ಕಾವೇರಮ್ಮ ಮತ್ತು ಪ್ರತಿವಾದಿಯ ಮದ್ಯೆ ಪಾಲು ವಿಭಜನೆ ಆಗಿರಲಿಲ್ಲ ಎಂದರೆ ಸರಿಯಲ್ಲ.

15. ನಿಪಿ.5 ಮತ್ತು 6 ರಲ್ಲಿ ದಾವಾ ಆಸ್ತಿಗಳು ಪ್ರತಿವಾದಿ ಮತ್ತು ಕಾವೇರಮ್ಮರವರ ಜಂಟಿ ಹೆಸರಿನಲ್ಲಿರುವುದು ಸುಳ್ಳಾಗಿರುತ್ತದೆ. ಕಾವೇರಮ್ಮರವರ ಮರಣದ ನಂತರ ದಾವಾ ಆಸ್ತಿಗಳು ನಿಪಿ.7 ಮತ್ತು 8 ರಂತೆ ಕೇವಲ ಪ್ರತಿವಾದಿಯ ಹೆಸರಿಗೆ ಮಾತ್ರ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳು ಕೇವಲ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಆದ ಆದೇಶವನ್ನು ನಾವು ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನಿಸಿರುವುದಿಲ್ಲ. ಪ್ರತಿವಾದಿಯ ಹೆಸರಿಗೆ ಖಾತೆ ವರ್ಗವಣೆ ಆದ ಆದೇಶವನ್ನು ನನ್ನ ಗಂಡ ಉಪತಹಸೀಲ್ದಾರ, ಸಾಲಿಗ್ರಾಮ ರವರ ಮುಂದೆ ಪ್ರಶ್ನಿಸಿದ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನನ್ನ ಗಂಡ ನಿಪಿ.1 ರಿಂದ 4 ರ ವಿಲುನಾಮೆಗಳನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಅಧಿಕಾರ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**